ಇದ್ದಂಗ ಇದ್ದಿ. ಈ ಮನ್ಯಾಗ ಒಂದು ಕಂಬಾಗಿ ಇದ್ದು ಬುಡುತಿನಂಗೆ' ಎಂದು ಮದುವೆಯಾಗಲು ನಿರಾಕರಿಸಿದ್ದನು. ಅವರಪ್ಪ ಕರೆಪ್ಪ ಬಂದು ಎಷ್ಟು ಅಂಗಲಾಚಿದರೂ, ಬೇರೆಯವರಿಂದ ಹೇಳಿಸಿದರೂ ಮದುವೆಗೆ ಒಪ್ಪಲಿಲ್ಲ. ಗೌಡರು 'ಲೇ... ಕೆಂಚ ಒಮ್ಮೆ ಹೆಣ್ಣಿನ ರುಚಿ ನೋಡಿಬಾರಲೇ... ಅವಾಗರ ನಿನಗ ಮದುವಿ ಮಾಡಿಕ್ಯಾಬೇಕನುಸುತದನು. ರೊಕ್ಕ ಕೊಡುತಿನಿ ಸಿರವಾರದ ಸೂಳೆಗೆರಿಗೆ ಹೋಗಿ ಬರುತೆನು. ಇಲಾ ಯಾವದನ ನೋಡಿಕಂಡಿದ್ದೆನು' ಎಂದು ಕೇಳಿದ್ದರು. ನಾಚಿ ನೀರಾದ ಕೆಂಚ 'ಅಂಗಲ್ಲಪ್ಪೋ... ನನಗ ಎದುಕನು ಮದುವಿ ಅಂದರ ಮೈಮ್ಯಾಗ ಮುಳ್ಳು ಏಳುತಾವ' ಎಂದು ಮದುವೆ ಬೇಡವೇ ಬೇಡ ಎಂದು ನಿರಾಕರಿಸಿದ್ದನು. 'ಆಯ್ತುಲೇ... ನಿನಗ ಯಾವಾಗ ಮನಸು ಬರ್ತದ ಅವಾಗ ಮದುವಿ ಆಗು. ಹುಡಿಗಿನ್ನ ನೋಡಿ ಮದುವಿ ಮಾಡೋ ಜವಾಬ್ದಾರಿ ನಂದು' ಎಂದಿದ್ದರು. ಕೆಂಚನಿಗೆ ನಲವತ್ತೈದು ವರ್ಷವಾದರೂ ಮದುವೆ ಆಗದೆ ಹಾಗೇ ಉಳಿದಿದ್ದ. ಮಗ ಮದುವಿ ಆಗಲಿಲ್ಲ ಅನ್ನೋ ಕೊರಗಿನಲ್ಲಿ ಅವರಪ್ಪ ಕರೆಪ್ಪ ತೀರಿಕಂಡ.

ಮಗ ಪುರುಷೋತ್ತಮಗೌಡನಿಗೆ ಹತ್ತು ವರ್ಷ ಇರಬೇಕು. ಅದೇನನಿಸಿತೋ, ಗೌಡರಿಗೆ ಬಸುವಿ ಬುಡಲು ತಯಾರಾಗಿದ್ದ ಚೆಲುವವ್ವನ ಮಗಳು ಶ್ಯಾಮವ್ವನ ಇಟುಗಂಡುಬುಟ್ಟರು. ದಿನಾ ಕೇರಿಗೆ ಹೋಗಕ ಸುರುವು ಮಾಡಿದರು. ಊರು ಮಂದಿ 'ಮೈಲಿಗಿ ಆಗದ ಮನೆ ಇದೊಂದು ಉಳಿದಿತ್ತು. ಈಗ ಅದನು ಮೈಲಿಗಿ ಆತು ನೋಡು. ಮನ್ಯಾಗ ದೇವರಂತ ಹೆಂಡತಿನ್ನ ಇಟುಕೊಂಡು ಮತ್ಯಾಕ ಕೇರಿಗಿ ಬಂದರೂ ಅಂತೀನಿ' ಎಂದು ಮಾತಾಡಿಕೊಂಡರು.

ಕೆಂಚನಿಗಂತೂ ಸಿಡಿಲು ಬಡದಂಗಾತು. ಅವರ ಕಾಲು ಹಿಡುಕೊಂಡು ಗೋಳೋ ಅಂತ ಅತ್ತುಬಿಟ್ಟ. 'ಯಪ್ಪಾ... ಇಂಗ್ಯಾಕ ಮಾಡಿದೆಪ... ಮನ್ಯಾಗ ಬೆಳದ ಮಗ... ನೂರು ಜನ್ಮ ಹೆತ್ತರೂ ಋಣ ತೀರಿಸಲಾರದಂತ ಗೌಡಸಾನಿ. ಗೌಡತಿ ಮುಖ ನೋಡಬೇಕಿತ್ತಪ್ಪೋ. ಯಪ್ಪಾ... ನೀನು ಅಲ್ಲದ್ದೂ ಮಾಡಿಬುಟ್ಟೆಪ್ಪೋ... ಇದು ಯಾಕೋ ನನಗ ಪಸಂದ ಕಾಣದಿಲ್ಲಪೋ...' 'ಲೇ... ಅದುಕ್ಯಾಕ ಅಷ್ಟು ಕೊರುಗುತ್ತಲೇ. ನಾನೇನು ಅಲ್ಲದ್ದು ಮಾಡೀನಿ. ಊರು ಗೌಡರು ಇದನ್ನ ಮಾಡಿಕೊಂಡು ಬಂದಾರ...' 'ಯಪ್ಪಾ... ನಿಮ್ಮ ಮನಿತನದಾಗ ಯಾರು ಹೀಂಗ ಬಸುವಿನ್ನ ಇಟುಗಂಡಾರಪ... ಈ ಮನಿಗಿ ಒಂದು ಮರ್ಯಾದಿ ಐತೆಪ. ಅದರಾಗ ಗೌಡಸಾನಿನ ನೋಡಪ...' ಎಂದು ಎಷ್ಟೋ ದಿನ ಗೋಳಾಡಿದ್ದ. ಆದರ ಗೌಡರು ಕರಗಲಿಲ್ಲ. ಸಾಧ್ವಿ ಗೌರಮ್ಮ ಮೌನವಾದಳು. ಗೌಡರು ಎಷ್ಟು ಮಾತಾಡಿಸಿದರೂ ಮಾತಾಡಲಿಲ್ಲ. 'ಇನ್ನೂ ನನ ಮೈ ಮುಟ್ಟಾಕ ತಮಗ ಅಧಿಕಾರ ಇಲ್ಲ. ನಿಮ್ಮ ಮನಸ್ಸು ಬಂದಾಂಗ ಇರ್ರಿ. ಮತ್ತ ನನ ತಂಟ್ಯಕ ಬರಬ್ಯಾಡಿರಿ. ಮನೆ ಮರ್ಯಾದಿ ತೆಗದ್ರಿ, ಆಯಿತು.' ಎಂದು ನಿಷ್ಠುರವಾಗಿ ಮಾತಾಡಿದ್ದೇ ಕೊನೆ. ಮಗನ ಮುಖ ನೋಡಿಕೊಂಡು ದಿನಗಳನ್ನು ದೂಡುತ್ತಿದ್ದಳು. ಆದರೆ ಮನಸ್ಸಿನಲ್ಲಿ ಕೊರೆಯುತ್ತಿದ್ದ ಹುಳ ಮಗನಿಗೆ ಹತ್ತು ವರ್ಷ ಇರುವಾಗ ಬಲಿ ತೆಗೆದುಕೊಂಡಿತು. ಮನೆ ಸ್ಮಶಾನವಾಯಿತು.



ಮಗ ಪುರುಷೋತ್ತಮನನ್ನು ಓದಲು ಹಾಸ್ಟೆಲ್‌ಗೆ ಹಾಕಿದರು. ಅವನು ಊರು ಕಡೆ ಹೆಚ್ಚು ಬರದೇ ಚೆನ್ನಾಗಿ ಓದಿದ. ಎಂಜಿನಿಯರ್ ವೃತ್ತಿ ಸೇರಿದ. ಅಮೆರಿಕಕ್ಕೆ ಹೋದ. ಅನೇಕ ಪ್ರಾಜೆಕ್ಟ್‌ಗಳನ್ನು